ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಪ್ರಕಟಣೆ

ವಿಷಯ: ಸಣ್ಣ ಖನಿಜ ಸಂಪತ್ತಿನ ಮೇಲಣ ನೀತಿಯನ್ನು ರೂಪಿಸಿ ಸರ್ಕಾರಕ್ಕೆ ಸಲಹೆ ನೀಡಲು ಸದನ ಸಮಿತಿ ರಚನೆ

ಅಧ್ಯಕ್ಷರು: ಸಣ್ಣ ಖನಿಜ ಸಂಪತ್ತಿನ ಮೇಲಣ ನೀತಿಯನ್ನು ಸೂಕ್ತವಾಗಿ ರೂಪಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸರ್ಕಾರಕ್ಕೆ ಸಲಹೆ ನೀಡಲು ಸದನ ಸಮಿತಿಯನ್ನು ರಚಿಸಲು ಸರ್ಕಾರವು ಸಮ್ಮತಿಸಿರುವುದರಿಂದಾಗಿ, ನಾನು ಈ ಸದನದಿಂದ 22 ಮಂದಿ ಸದಸ್ಯರು ಹಾಗೂ ವಿಧಾನ ಪರಿಷತ್ತಿನಿಂದ 5 ಮಂದಿ ಸದಸ್ಯರಿರುವ ಒಟ್ಟು 27 ಮಂದಿ ಸದಸ್ಯರಿರುವ ಜಂಟಿ ಸಲಹಾ ಸಮಿತಿಯನ್ನು ರಚಿಸುತ್ತೇನೆ. ಈ ಸದನದ ಈ ಮುಂದಿನ ಸದಸ್ಯರು ಜಂಟಿ ಸಲಹಾ ಸಮಿತಿಯ ಸದಸ್ಯರು ಮತ್ತು ಅಧ್ಯಕ್ಷರಾಗಿರುತ್ತಾರೆ. ವಿಧಾನ ಪರಿಷತ್ತನ್ನು ಪ್ರತಿನಿಧಿಸುವ ಜಂಟಿ ಸಲಹಾ ಸಮಿತಿಯ ಸದಸ್ಯರನ್ನು ವಿಧಾನ ಪರಿಷತ್ತು ಅನಂತರ ಸೂಚಿಸುತ್ತದೆ. ಸಮಿತಿಯ ವರದಿಯನ್ನು ಸದನಕ್ಕೆ 1992ರ ಮಾರ್ಚ್ 31ನೇ ದಿನಾಂಕದ ವೇಳೆಗೆ ಮಂಡಿಸಲಾಗುವುದು.

ಶ್ರೀ ಯುತರಾದ:

1 ಎಂ.ಎಲ್. ಉಸ್ತಾದ್ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಅಧ್ಯಕ್ಷರು

2. ಡಿ.ಬಿ. ಚಂದ್ರೇಗೌಡ ವಿಧಾನ ಸಭೆಯ ವಿರೋದ ಪಕ್ಷದ ನಾಯಕರು ಸದಸ್ಯರು

3. ಪಿ.ಜಿ.ಆರ್. ಸಿಂಧ್ಯ ವಿಧಾನ ಸಭೆಯ ವಿರೋಧ ಪಕ್ಷದ ಉಪನಾಯಕರು

4. ಬಿ.ಎನ್. ಯಡಿಯೂರಪ್ಪ ವಿಧಾನ ಸಭೆಯ ಸದಸ್ಯರು

5. ಸಿ ಬೈರೇಗೌಡ ವಿಧಾನ ಸಭೆಯ ಸದಸ್ಯರು

6. ಬಾಬಾಗೌಡ ಪಾಟಿಲ್ ವಿಧಾನ ಸಭೆಯ ಸದಸ್ಯರು

7. ವಾಟಾಳ್ ನಾಗರಾಜ್ ವಿಧಾನ ಸಭೆಯ ಸದಸ್ಯರು

8. ಬಿ.ಐ. ಪಾಟೀಲ್ ವಿಧಾನ ಸಭೆಯ ಸದಸ್ಯರು

9. ಕಮರುಲ್ ಇಸ್ಲಾಂ ವಿಧಾನ ಸಭೆಯ ಸದಸ್ಯರು

10. ಭಕ್ತವಚ್ಚಲಂ ವಿಧಾನ ಸಭೆಯ ಸದಸ್ಯರು

11. ಹೆಚ್.ಎಂ. ರೇವಣ್ಣ ವಿಧಾನ ಸಭೆಯ ಸದಸ್ಯರು

12. ಹರ್ಷಕುಮಾರ ಗೌಡ ವಿಧಾನ ಸಭೆಯ ಸದಸ್ಯರು

13. ಕೆ ಸಿದ್ಧಯ್ಯ ಸದಸ್ಯರು

14. ಕಾನಡೆ ಗೋಪಾಲ ಮುಕುಂದ ವಿಧಾನ ಸಭಾ ಸದಸ್ಯರು ಸದಸ್ಯರು

15. ಬಾಬುರಾವ್ ಚವಾಣ್ ವಿಧಾನ ಸಭಾ ಸದಸ್ಯರು ಸದಸ್ಯರು

16. ಗೋವಿಂದಪ್ಪ ಹೆಚ್ ಜುಟ್ಟಾಲ್ ವಿಧಾನ ಸಭಾ ಸದಸ್ಯರು

17. ಬಿ. ಸ್ವಾಮಿರಾವ್ ವಿಧಾನ ಸಭಾ ಸದಸ್ಯರು
18. ಉಮಾಪತಿ ವಿಧಾನ ಸಭಾ ಸದಸ್ಯರು
19. ಶಫೀ ಅಹಮದ್ ವಿಧಾನ ಸಭಾ ಸದಸ್ಯರು
20. ಟಿ.ಬಿ. ಜಯಚಂದ್ರ ವಿಧಾನ ಸಭಾ ಸದಸ್ಯರು
21. ಶ್ರೀಮತಿ ದಮಯಂತಿ ಬೋರೇಗೌಡ ವಿಧಾನ ಸಭಾ ಸದಸ್ಯರು
22. ಬಿ.ಎಸ್. ಪಾಟೀಲ್ ವಿಧಾನ ಸಭಾ ಸದಸ್ಯರು

ಸಮಿತಿಯ ಪರಿಶೀಲನಾಂಶಗಳು

ಪರಿಸರ ಮತ್ತು ಜೀವಿ ಪರಿಸರದ ಮೇಲೆ ಕನಿಷ್ಟ ಪರಿಣಾಮವನ್ನು ಬೀರುವ ಒಂದು ಸುವ್ಯವಸ್ಥಿತ ಮತ್ತು ವೈಜ್ಞಾನಿಕ ಕಲ್ಲುಗಣಿ ಕೆಲಸಕ್ಕಾಗಿ ಒಂದು ಬೃಹತ್ ಸಮೀಚಿನ ದೃಷ್ಟಿಯ ನೀತಿಯನ್ನು ಸೂಚಿಸಲು ಹಾಗೂ ಮೌಲ್ಯಭರಿತ ಖನಿಜಗಳ ರಫ್ತಿಗೆ ಒಂದು ಸೂಕ್ತ ಒತ್ತು ಮತ್ತು ಅದರಿಂದ ಬರುವ ಆದಾಯದ ವಸೂಲಿಗಾಗಿ ಕ್ರಮಗಳನ್ನು ಸೂಚಿಸುವುದು.

ಅಧ್ಯಕ್ಷರ ತೀರ್ಪು

ವಿಷಯ: ವಿಧಾನ ಮಂಡಲದ ಸದಸ್ಯರಿಗೆ ಸರ್ಕಾರದ ಆದೇಶಗಳ ಪ್ರತಿಗಳನ್ನು ಒದಗಿಸುವ ಬಗ್ಗೆ

ಅಧ್ಯಕ್ಷರು: ಸನ್ಮಾನ್ಯ ಸದಸ್ಯರಾದ ಶ್ರೀ ಏಕಾಂತಯ್ಯರವರು, ನೀರಾವರಿ ಇಲಾಖೆಯ ಕಾರ್ಯದರ್ಶಿಯವರ ವಿರುದ್ಧ ವಿಶೇಷ ಹಕ್ಕಿನ ಚ್ಯುತಿಯ ಪ್ರಶ್ನೆಯ ಬಗ್ಗೆ ಕರ್ನಾಟಕ ವಿಧಾನಸಭೆಯಲ್ಲಿ ಎತ್ತಲು ಕಾರ್ಯವಿಧಾನ ಮತ್ತು ಕಾರ್ಯಕಲಾಪಗಳ ನಿಯಮಗಳ 191ನೇ ನಿಯಮದ ಅಡಿಯಲ್ಲಿ ನೋಟೀಸು ನೀಡಿದ್ದಾರೆ.

ಸನ್ಮಾನ್ಯ ಸದಸ್ಯರಾದ ಶ್ರೀ ಏಕಾಂತಯ್ಯರವರು ನೀರಾವರಿ ಇಲಾಖೆಯಿಂದ ಹೊರಡಿಸಲಾದ ಕೆಲವು ಸರ್ಕಾರಿ ಆದೇಶಗಳನ್ನು ತಮಗೆ ದೊರಕಿಸಿಕೊಡಬೇಕೆಂದು ಕೋರಿ ದಿನಾಂಕ 19-9-1991 ರಂದು ನನ್ನ ಸಚಿವಾಲಯಕ್ಕೆ ಒಂದು ಪತ್ರವನ್ನು ನೀಡಿದ್ದಾರೆ. ನನ್ನ ಸಚಿವಾಲಯವು ಸನ್ಮಾನ್ಯ ಸದಸ್ಯರಿಗೆ ಆಗತ್ಯವಿರುವ ಸರ್ಕಾರಿ ಆದೇಶಗಳ ಆ ಪ್ರತಿಗಳನ್ನು ಒದಗಿಸುವಂತೆ ಕೋರಿ ನೀರಾವರಿ ಇಲಾಖೆಯ ಕಾರ್ಯದರ್ಶಿಯವರಿಗೆ ಅಂದೇ ಒಂದು ಪತ್ರವನ್ನು ಬರೆದಿದೆ. ಆ ಪತ್ರಕ್ಕೆ ಉತ್ತರವಾಗಿ ಸರ್ಕಾರದ ಕಾರ್ಯದರ್ಶಿಯವರು ದಿನಾಂಕ 23-8-1991 ರಂದು ನನ್ನ ಸಚಿವಾಲಯಕ್ಕೆ ಒಂದು ಕಾಗದವನ್ನು ಬರೆದು ವಿಧಾನ ಮಂಡಲದ ಸದಸ್ಯರಿಗೆ ಸರ್ಕಾರವು ಸರ್ಕಾರಿ ಆದೇಶಗಳ ಪ್ರತಿಗಳನ್ನು ಯಾವ ಸಂದರ್ಭದಲ್ಲಿ ಮತ್ತು ಯಾವ ನಿಯಮದ ಉಪಬಂಧಗಳ ಅಡಿಯಲ್ಲಿ ಒದಗಿಸಬೇಕು. ಎಂಬ ಬಗ್ಗೆ ಸ್ಪಷ್ಟಪಡಿಸಲು ಕೋರಿದ್ದಾರೆ. ಸಾರ್ವಜನಿಕ ದಸ್ತಾವೇಜುಗಳಾದ ಸರ್ಕಾರಿ ಆದೇಶಗಳ ಪ್ರತಿಗಳನ್ನು ಒದಗಿಸುವ ಬಗ್ಗೆ ಸರ್ಕಾರದ ಕಾರ್ಯದರ್ಶಿಯವರು ಈ ಪ್ರಶ್ನೆಯನ್ನು ಎತ್ತಿರುವುದು ನನಗೆ ಆಶ್ಚರ್ಯವನ್ನುಂಟು ಮಾಡಿದೆ. ಸರ್ಕಾರಿ ಆದೇಶಗಳ ಪ್ರತಿಗಳಿಗಾಗಿ ಇಂಥ ಕೋರಿಕೆ ಬಂದಾಗಲೆಲ್ಲಾ ಅಂಥ ಕೋರಿಕೆಯನ್ನು ತಕ್ಷಣ ನೆರವೇರಿಸುವುದು ನನ್ನ ಸಚಿವಾಲಯದ ಅನುಭವ.

ವಿಧಾನ ಮಂಡಲದ ಸನ್ಮಾನ್ಯ ಸದಸ್ಯರು ತಮ್ಮ ಕರ್ತವ್ಯಗಳ ಪರಿಣಾಮಕಾರಿ ನಿರ್ವಹಣೆಗಾಗಿ ಸರ್ಕಾರಿ ಆದೇಶಗಳ ಪ್ರತಿಗಳನ್ನು ಪಡೆಯಲು ಹಕ್ಕುಳ್ಳವಾರಾಗಿರುತ್ತಾರೆ.